# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಆ್ಯಸಿಡ್ ದಾಳಿ/ ದೌರ್ಜನ್ಯಕ್ಕೊಳಗಾದ ಮಹಿಳೆಯರು/ ಹೆಣ್ಣುಮಕ್ಕಳಿಗೆ ಪರಿಹಾರವನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ: ಮಮಇ 268 ಮಮಅ 2006 ದಿನಾಂಕ: 27.11.2007
2) ಸರ್ಕಾರಿ ಆದೇಶ ಸಂಖ್ಯೆ: ಮಮಇ 29 ರಾಮಆ 2013, ದಿನಾಂಕ: 20.03.2015
3) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಏಕ ಕಡತ ಸಂಖ್ಯೆ: ಮಮಅ:ಮಕವಿ:ಮ.ನಿಧಿ:2/ 2015-16, ದಿನಾಂಕ:30.4.2015.

***

**ಪ್ರಸ್ತಾವನೆ:**

ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರು/ ಹೆಣ್ಣುಮಕ್ಕಳಿಗೆ ಪರಿಹಾರ ಕಲ್ಪಿಸುವ ಸುರಕ್ಷಾ ಯೋಜನೆಯಡಿ ಗಾಯದ ತೀವ್ರತೆಯ ಆಧಾರದ ಮೇಲೆ ಗರಿಷ್ಠ ರೂ.2.00ಲಕ್ಷ ಪರಿಹಾರವನ್ನು ಮಂಜೂರು ಮಾಡಲು ಮೇಲೆ ಕ್ರ.ಸಂ(1)ರಲ್ಲಿ ಓದಲಾದ ದಿನಾಂಕ:27-11-2007ರ ಆದೇಶದಲ್ಲಿ ಮಂಜೂರಾತಿ ನೀಡಲಾಗಿತ್ತು.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ(CRL) ಸಂಖ್ಯೆ: 129/2006ರ ಪ್ರಕರಣದಲ್ಲಿ ದಿ:18.07.2013 ರಂದು ನೀಡಿರುವ ತೀರ್ಪಿನ ಮೇರೆಗೆ, ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ/ ಹೆಣ್ಣುಮಕ್ಕಳಿಗೆ ಸುರಕ್ಷಾ ಯೋಜನೆಯಡಿ ಮಹಿಳಾ ಆಯೋಗದಿಂದ ನೀಡಲಾಗುತ್ತಿದ್ದ ಪರಿಹಾರ ಮೊತ್ತ ರೂ. 2.00 ಲಕ್ಷಗಳನ್ನು ಪರಿಷ್ಕರಿಸಿ ರೂ. 3.00 (ರೂಪಾಯಿ ಮೂರು ಲಕ್ಷಗಳು ಮಾತ್ರ) ಲಕ್ಷಗಳಿಗೆ ಹೆಚ್ಚಿಸಿ ಮೇಲೆ ಕ್ರ.ಸಂ(2)ರಲ್ಲಿ ಓದಲಾದ ದಿ:20-03-2015ರ ಆದೇಶ ಹೊರಡಿಸಲಾಗಿದೆ.

2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಆರ್ಥಿಕ ಪರಿಹಾರ ನೀಡಲು ರಾಜ್ಯ ಮಟ್ಟದಲ್ಲಿ ಮಹಿಳೆಯರ ನಿಧಿಯನ್ನು ಸ್ಥಾಪಿಸಲು 5 ಕೋಟಿ ರೂ. ನೀಡಲಾಗುವುದು. ಈ ನಿಧಿಯಿಂದ ದೌರ್ಜನ್ಯಕ್ಕೊಳಗಾದ ಮಹಿಳೆಯರ ತುರ್ತು ಪರಿಹಾರಕ್ಕಾಗಿ ಪ್ರತಿ ಪ್ರಕರಣಕ್ಕೆ ಗರಿಷ್ಠ 2.00 ಲಕ್ಷ ಪರಿಹಾರ ಮತ್ತು ದೌರ್ಜನ್ಯದಿಂದ ಮೃತಪಟ್ಟಲ್ಲಿ ಕುಟುಂಬ ಸದಸ್ಯರಿಗೆ 1.00 ಲಕ್ಷ ರೂ. ಮರಣ ಪರಿಹಾರ ನೀಡಲಾಗುವುದೆಂದು ಘೋಷಿಸಲಾಗಿರುತ್ತದೆ. ಈ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿ, ಆಸಿಡ್‌ದಾಳಿಗೊಳಗಾದ ಮಹಿಳೆಯರಿಗೆ ರೂ. 3.00 ಲಕ್ಷ ಪರಿಹಾರ ನೀಡಲು ರೂ. 5.00 ಕೋಟಿಗಳ ನಿಧಿಯನ್ನು ಸ್ಥಾಪಿಸಲು ಹಾಗೂ ಮಾರ್ಗಸೂಚಿಗಳೊಂದಿಗೆ ಅನುಷ್ಠಾನಗೊಳಿಸಲು ಮಂಜೂರಾತಿ ನೀಡುವಂತೆ, ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಮೇಲೆ ಕ್ರ.ಸಂ.(3)ರಲ್ಲಿ ಓದಲಾದ ಏಕ ಕಡತ ದಿನಾಂಕ:30.4.2015ರಲ್ಲಿ ಕೋರಿರುತ್ತಾರೆ.

..2

ಆ್ಯಸಿಡ್ ದಾಳಿ/ ದೌರ್ಜನಕ್ಕೆ ಒಳಗಾದ ಮಹಿಳೆಯರಿಗೆ ತುರ್ತು ಆರ್ಥಿಕ ಪರಿಹಾರ ನೀಡಲು ರಾಜ್ಯ ಮಟ್ಟದಲ್ಲಿ ರೂ. 5.00 ಕೋಟಿಗಳ ವೆಚ್ಚದಲ್ಲಿ 'ಸ್ಥೈರ್ಯ'ಎಂಬ ಯೋಜನೆಯಡಿ ನಿಧಿ ಸ್ಥಾಪಿಸಲು ಯೋಜನೆಯ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಮಮಇ 27 ರಾಮಆ 2015, ದಿನಾಂಕ: 31.08.2015</u>

2015-16ನೇ ಸಾಲಿನ ಆಯವ್ಯಯ ಘೋಷಣೆಯಂತೆ ಆ್ಯಸಿಡ್ ದಾಳಿ/ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರ ತುರ್ತು ಪರಿಹಾರಕ್ಕಾಗಿ ಪ್ರತಿ ಪ್ರಕರಣಕ್ಕೆ ಗರಿಷ್ಠ 2 ಲಕ್ಷ ರೂ. ಪರಿಹಾರ ಮತ್ತು ಆ್ಯಸಿಡ್ ದಾಳಿ/ ದೌರ್ಜನ್ಯದಿಂದ ಮೃತಪಟ್ಟಲ್ಲಿ ಕುಟುಂಬ ಸದಸ್ಯರಿಗೆ 1 ಲಕ್ಷ ರೂ. ಮರಣ ಪರಿಹಾರ ನೀಡಲು ರಾಜ್ಯ ಮಟ್ಟದಲ್ಲಿ ರೂ. 5.00 ಕೋಟಿಗಳಲ್ಲಿ (ರೂ. ಐದು ಕೋಟಿಗಳಲ್ಲಿ) ಮಹಿಳೆಯರ ನಿಧಿಯನ್ನು 'ಸ್ಥೈರ್ಯ' ಎಂಬ ಯೋಜನೆಯಡಿ ಸ್ಥಾಪಿಸಲು ಈ ಆದೇಶಕ್ಕೆ ಲಗತ್ತಿಸಿರುವ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಸುರಕ್ಷಾ ಯೋಜನೆಯಡಿ ಅರ್ಹರಾದವರಿಗೆ ಈ ಯೋಜನೆಯ ಸೌಲಭ್ಯವು ಅನ್ವಯಿಸುವುದಿಲ್ಲ. ಈ ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಸತಕ್ಕದ್ದಲ್ಲ. ಮಂಜೂರಾತಿಗಾಗಿ ಈ ಆದೇಶದ ಮಾರ್ಗಸೂಚಿಯ ಕ್ರ. ಸಂ. 6ರಂತೆ ತುರ್ತು ಕ್ರಮ ಕೈಗೊಂಡು, ಸೂಕ್ತ ಸಮರ್ಥನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

2015-16ನೇ ಸಾಲಿನ ಲೆಕ್ಕ ಶೀರ್ಷಿಕೆ 2235-02-103-0-52 (ಯೋಜನೆ) ಅಡಿಯಲ್ಲಿ ಒದಗಿಸಿರುವ ಅನುದಾನದಿಂದಲೇ ಈ ವೆಚ್ಚವನ್ನು ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 535 ವೆಚ್ಚ-3/2015, ದಿನಾಂಕ:09.06.2015 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

31.8.15
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ - 2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಜಿ & ಎಸ್‌ಎಸ್‌ಎ/ ಇಆರ್‌ಎಸ್‌ಎ ಮತ್ತು ಎ & ಇ )ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು.

3. ರಾಜ್ಯ ಆಯುಕ್ತರು, ಅಂಗವಿಕಲ ವ್ಯಕ್ತಿಗಳ ಅಧಿನಿಯಮ ಕಛೇರಿ,ರಿಸಲ್ದಾರ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು.
4. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
5. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು.
8. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಕಾವೇರಿ ಭವನ, ಬೆಂಗಳೂರು.
9. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು.
10. ಎಲ್ಲಾ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರ ಮುಖಾಂತರ)
11. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರ ಮುಖಾಂತರ)
12. ಎಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು, (ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರ ಮುಖಾಂತರ)
13. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
14. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
15. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
16. ಸರ್ಕಾರದ ಉಪ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬೆಂಗಳೂರು.
17. ಶಾಖಾಧಿಕಾರಿ, ಸ್ತ್ರೀಮರ ಶಾಖೆ, ಮಹಿಳಾ ಮತ್ತು ಮಕ್ಕಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು
18. ಶಾಖಾ ಕಡತ/ ಹೆಚ್ಚುವರಿ ಪ್ರತಿಗಳು.

ಅನುಬಂಧ-1

ಸರ್ಕಾರಿ ಆದೇಶ ಸಂಖ್ಯೆ: ಮಮಇ 27 ರಾಮಆ 2015, ದಿನಾಂಕ: 31.08.2015

## ಆಸಿಡ್ ದಾಳಿ ಹಾಗೂ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆರ್ಥಿಕ ಪರಿಹಾರ ನೀಡುವ ಬಗ್ಗೆ "ಸ್ಥೈರ್ಯ" ಯೋಜನೆಯ ಮಾರ್ಗಸೂಚಿಗಳು

1) ದಿನಾಂಕ:1.7.2015ರ ನಂತರ ದಾಖಲಾದ ಪ್ರಕರಣಗಳು ಈ ಯೋಜನೆಯ ವ್ಯಾಪ್ತಿಗೊಳಪಡುತ್ತವೆ.
2) ಆಸಿಡ್ ದಾಳಿ / ದೌರ್ಜನ್ಯಕ್ಕೊಳಗಾದ (ಅತ್ಯಾಚಾರ, ಸಾಮೂಹಿಕ ಅತ್ಯಾಚಾರ ಹಾಗೂ ತೀವ್ರತರ ಅತ್ಯಾಚಾರ ದೌರ್ಜನ್ಯ ಪ್ರಕರಣಗಳಿಗೊಳಗಾದ) ಮಹಿಳೆಯರಿಗೆ ತುರ್ತು ಅಗತ್ಯಗಳಿಗಾಗಿ ಹಾಗೂ ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗಾಗಿ ಈ ಯೋಜನೆಯಲ್ಲಿ ಪರಿಹಾರ ನೀಡುವುದು.
3) ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಜಂಟಿ ಹೆಸರಿನಲ್ಲಿ "ಸ್ಥೈರ್ಯನಿಧಿ" ಖಾತೆಯನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೆರೆಯುವುದು.
4) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಂದ ಬಿಡುಗಡೆ ಮಾಡುವ ಅನುದಾನವನ್ನು ಜಂಟಿ ಖಾತೆಗೆ ಜಮಾ ಮಾಡುವುದು ಮತ್ತು ಖರ್ಚುವೆಚ್ಚಗಳ ಬಗ್ಗೆ ಸೂಕ್ತ ದಾಖಲೆಗಳನ್ನು ನಿರ್ವಹಿಸುವುದು.
5) ಆರ್ಥಿಕ ಪರಿಹಾರದ ಅರ್ಜಿಯನ್ನು ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ~~ಇವರು ಸ್ವೀಕರಿಸುವುದು. ಜಿಲ್ಲಾ ಉಪ ನಿರ್ದೇಶಕರು~~ ಪ್ರಥಮ ಮಾಹಿತಿ ವರದಿ, ವೈದ್ಯಕೀಯ ಪ್ರಮಾಣ ಪತ್ರ ಇತ್ಯಾದಿ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಜಿಲ್ಲಾಧಿಕಾರಿಗಳ ಅನುಮೋದನೆಯನ್ನು ಪಡೆದು ಸಂತ್ರಸ್ತ ಮಹಿಳೆಯರಿಗೆ ಪ್ರಥಮ ಹಂತವಾಗಿ ತುರ್ತು ಚಿಕಿತ್ಸೆಗಾಗಿ ಅರ್ಜಿ ಸ್ವೀಕರಿಸಿದ 24 ಗಂಟೆಗಳ ಒಳಗಾಗಿ ಪರಿಹಾರವಾಗಿ ರೂ.25,000/- ವರೆಗೆ ಮಾತ್ರ ವಿತರಿಸುವುದು.
6) ಗರಿಷ್ಠ ಪರಿಹಾರ ಮೊತ್ತ ಆಸಿಡ್‌ದಾಳಿಗೊಳಗಾದವರಿಗೆ ರೂ.3.00 ಲಕ್ಷ, ಅತ್ಯಾಚಾರ ಹಾಗೂ ತೀವ್ರತರ ಅತ್ಯಾಚಾರ ದೌರ್ಜನ್ಯಕ್ಕೊಳಪಟ್ಟ ಮಹಿಳೆಯರಿಗೆ ರೂ.2.00 ಲಕ್ಷ ಮಿತಿಗೆ ~~ಒಳಪಟ್ಟು~~ ತೀವ್ರವಾದ ಆಘಾತ/ದೈಹಿಕ (ಬಾಹ್ಯ/ಆಂತರಿಕ) ವಿಕಲತೆಗೆ ಒಳಗಾಗಿ, ಜೀವನೋಪಾಯಕ್ಕೆ ದುಡಿಯಲು ಅಶಕ್ತ/ ಅನರ್ಹರಾದವರಿಗೆ ಪ್ರಕರಣದ ಗಂಭೀರತೆಗೆ ಅನುಗುಣವಾಗಿ ವೈದ್ಯಕೀಯ ದೃಢೀಕರಣದ ಆಧಾರದ ಮೇಲೆ ನೊಂದ ಮಹಿಳೆಯರ ಬದುಕಿನ ಆಸರೆಗಾಗಿ ಸೂಕ್ತ ಪ್ರಮಾಣದ ಪರಿಹಾರವನ್ನು ಜಿಲ್ಲಾಮಟ್ಟದ ಸಮಿತಿಯ ಶಿಫಾರಸ್ಸು ಸಹಿತ ಮಂಜೂರಾತಿಗಾಗಿ ಪೂರಕ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.
7) ಆಸಿಡ್ ದಾಳಿ / ಅತ್ಯಾಚಾರ ದೌರ್ಜನ್ಯಕ್ಕೊಳಪಟ್ಟ ಮಹಿಳೆಯರು ಮೃತಪಟ್ಟ ಸಂದರ್ಭದಲ್ಲಿ ಅವರ ವಾರಸುದಾರರಿಗೆ ನೀಡಬೇಕಾದ ರೂ.1.00 ಲಕ್ಷಗಳ ಪರಿಹಾರ ಧನವನ್ನು ಮರಣ ಪ್ರಮಾಣ ಪತ್ರ, ವಾರಸುದಾರರ ಬಗ್ಗೆ ಕಂದಾಯ ಇಲಾಖೆಯಿಂದ ಮಾಹಿತಿ ಪಡೆದು ಜಿಲ್ಲಾ ಮಟ್ಟದ ಸಮಿತಿಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಪರಿಹಾರ ಧನ ವಿತರಿಸುವುದು.
8) ಸರ್ಕಾರದ ಮಟ್ಟದಲ್ಲಿ ಪರಿಹಾರ ಕೋರುವ ಪ್ರಸ್ತಾವನೆ ಸ್ವೀಕರಿಸಿದ ತಕ್ಷಣವೇ ಪರಿಶೀಲಿಸಿ ಪರಿಹಾರ ಧನದ ಪ್ರಮಾಣವನ್ನು ನಿರ್ಧರಿಸಿ ಮಾನ್ಯ ಸಚಿವರ ಅನುಮೋದನೆ ಪಡೆದು, ಆದೇಶ ಹೊರಡಿಸುವುದು. ಆದೇಶದನುಸಾರ ಜಿಲ್ಲಾ ಸಮಿತಿಯು ಪರಿಹಾರ ವಿತರಿಸುವುದು.
9) ಆಸಿಡ್ ದಾಳಿ ಅತ್ಯಾಚಾರದ ದೌರ್ಜನ್ಯಕ್ಕೊಳಪಟ್ಟ ಮಹಿಳೆಗೆ ಪರಿಹಾರಕ್ಕೆ ಸಂಬಂಧಿಸಿದಂತೆ ಶಿಫಾರಸ್ಸು ಮಾಡುವ ಮೊದಲು ಇತರ ಯೋಜನೆಗಳಲ್ಲಿ ಪರಿಹಾರ ಮೊತ್ತ ಪಾವತಿಸಲು ಜಿಲ್ಲಾ ಮಟ್ಟದ ಸಮಿತಿ ಕ್ರಮವಹಿಸತಕ್ಕದ್ದು. ಇತರ ಯೋಜನೆಗಳಲ್ಲಿ ಗರಿಷ್ಠಮಿತಿಯ ಪರಿಹಾರ ಮೀರಿದ್ದಲ್ಲಿ ಉಳಿಕೆ ಮೊತ್ತಕ್ಕೆ ಮಾತ್ರ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸುವುದು.

31/8/15
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ - 2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಅನುಬಂಧ–2(ಎ)

## ಜಿಲ್ಲಾ ಸಾರ್ವಜನಿಕ ಆಸ್ಪತ್ರೆ

ಪ್ರಥಮ ಮಾಹಿತಿ ವರದಿ / ಶಸ್ತ್ರ ಚಿಕಿತ್ಸೆ/ ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗಾಗಿ
(ಆರೋಗ್ಯ ಇಲಾಖೆಯು ಗುರುತಿಸಿರುವ ಆಸ್ಪತ್ರೆಗಳಲ್ಲಿ ಅಥವಾ ಸರ್ಕಾರದ ಆಸ್ಪತ್ರೆಗಳಲ್ಲಿ ದಾಖಲಾದವರಿಗೆ ಮಾತ್ರ)

| ಕ್ರಸಂ | ವಿವರ | |
|---|---|---|
| 1 | ಮಹಿಳೆಯ ಹೆಸರು ________________ | |
| 2 | ವಯಸ್ಸು | |
| 3 | ತಂದೆ/ತಾಯಿ/ಗಂಡನ/ಪೋಷಕರ ಹೆಸರು ಮತ್ತು ವಿಳಾಸ | |
| 4 | ಉದ್ಯೋಗ | |
| 5 | ವಾರ್ಷಿಕ ಆದಾಯ | |
| 6 | ಯಾವ ಸ್ವರೂಪದ ದೌರ್ಜನ್ಯ | |
| 7 | ವೈದ್ಯರ ವರದಿ | |
| 8 | ಪ್ರಕರಣವನ್ನು ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ದಿನಾಂಕ ಹಾಗೂ ದಾಖಲಾತಿ ವಿವರ ಒದಗಿಸುವುದು | |
| 9 | ಎಫ್.ಐ.ಆರ್: (ಪೊಲೀಸ್ ಠಾಣೆಯಿಂದ ಪಡೆದು ಲಗತ್ತಿಸುವುದು) | |
| 10 | ಆಸ್ಪತ್ರೆಗೆ ದಾಖಲಾದ ದಿನಾಂಕ | |
| 11 | ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸುವುದು | |
| 12 | ಹೆಚ್ಚುವರಿ ಚಿಕಿತ್ಸೆ / ಶಸ್ತ್ರ ಚಿಕಿತ್ಸೆಯ ಅಗತ್ಯವಿದ್ದಲ್ಲಿ ವೈದ್ಯರ ಶಿಫಾರಸ್ಸು ಪತ್ರ ಲಗತ್ತಿಸುವುದು | |
| 13 | ವೈದ್ಯಾಧಿಕಾರಿಗಳ ಶಿಫಾರಸ್ಸು | |

ಜಿಲ್ಲಾ ಸರ್ಜನ್
ಜಿಲ್ಲಾ ಸಾರ್ವಜನಿಕ ಆಸ್ಪತ್ರೆ
____________ ಜಿಲ್ಲೆ

ಜಿಲ್ಲಾ ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
____________ ಜಿಲ್ಲೆ.

ಅನುಬಂಧ-2(ಬಿ)

## ತಾಲ್ಲೂಕು ವೈದ್ಯಾಧಿಕಾರಿಗಳು (ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ)

ಪ್ರಥಮ ಮಾಹಿತಿ ವರದಿ / ಶಸ್ತ್ರ ಚಿಕಿತ್ಸೆ/ ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗಾಗಿ
(ಆರೋಗ್ಯ ಇಲಾಖೆಯು ಗುರುತಿಸಿರುವ ಆಸ್ಪತ್ರೆಗಳಲ್ಲಿ ಅಥವಾ ಸರ್ಕಾರದ ಆಸ್ಪತ್ರೆಗಳಲ್ಲಿ ದಾಖಲಾದವರಿಗೆ ಮಾತ್ರ)

| ಕ್ರಸಂ | ವಿವರ | |
|---|---|---|
| 1 | ಮಹಿಳೆಯ ಹೆಸರು | |
| 2 | ವಯಸ್ಸು | |
| 3 | ತಂದೆ/ತಾಯಿ/ಗಂಡನ/ಪೋಷಕರ ಹೆಸರು ಮತ್ತು ವಿಳಾಸ | |
| 4 | ಉದ್ಯೋಗ | |
| 5 | ವಾರ್ಷಿಕ ಆದಾಯ | |
| 6 | ಯಾವ ಸ್ವರೂಪದ ದೌರ್ಜನ್ಯ | |
| 7 | ವೈದ್ಯರ ವರದಿ | |
| 8 | ಪ್ರಕರಣವನ್ನು ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ದಿನಾಂಕ ಹಾಗೂ ದಾಖಲಾತಿ ವಿವರ ಒದಗಿಸುವುದು | |
| 9 | ಎಫ್.ಐ.ಆರ್. (ಪೊಲೀಸ್ ಠಾಣೆಯಿಂದ ಪಡೆದು ಲಗತ್ತಿಸುವುದು) | |
| 10 | ಆಸ್ಪತ್ರೆಗೆ ದಾಖಲಾದ ದಿನಾಂಕ | |
| 11 | ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸುವುದು | |
| 12 | ಹೆಚ್ಚುವರಿ ಚಿಕಿತ್ಸೆ / ಶಸ್ತ್ರ ಚಿಕಿತ್ಸೆಯ ಅಗತ್ಯವಿದ್ದಲ್ಲಿ ವೈದ್ಯರ ಶಿಫಾರಸ್ಸು ಪತ್ರ ಲಗತ್ತಿಸುವುದು | |
| 13 | ವೈದ್ಯಾಧಿಕಾರಿಗಳ ಶಿಫಾರಸ್ಸು | |

ತಾಲ್ಲೂಕು ವೈದ್ಯಾಧಿಕಾರಿಗಳು.
ಸಾರ್ವಜನಿಕ ಆಸ್ಪತ್ರೆ
--------ತಾಲ್ಲೂಕು---------- ಜಿಲ್ಲೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು.
ಸಮಗ್ರ ಶಿಶು ಅಭಿವೃದ್ಧಿ ಯೋಜನೆ
--------ತಾಲ್ಲೂಕು---------- ಜಿಲ್ಲೆ

ಅನುಬಂಧ-3

**ಕರ್ನಾಟಕ ಮಹಿಳೆಯರ ನಿಧಿ ಬಳಕೆಗೆ ಸಂಬಂಧಿಸಿದಂತೆ ದೌರ್ಜನ್ಯ/ಆಸಿಡ್ ದಾಳಿ/ ಅತ್ಯಾಚಾರ ಪ್ರಕರಣಗಳಿಗೆ ನೀಡಬೇಕಾದ ತುರ್ತು ಪರಿಹಾರ, ಗರಿಷ್ಠ ಪರಿಹಾರ ಮತ್ತು ಮರಣ ಪರಿಹಾರ ಮಿತಿಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ**

| ಕ್ರಸಂ | ವಿವರ | ತುರ್ತು ಪರಿಹಾರ ಮೊತ್ತ ರೂ. | ಗರಿಷ್ಠ ಪರಿಹಾರ ಮೊತ್ತ ರೂ. | ಮರಣ ಪರಿಹಾರ ಮೊತ್ತ ರೂ. |
|---|---|---|---|---|
| 1 | ಆಸಿಡ್ ದಾಳಿಗೊಳಗಾದ ಮಹಿಳೆಯರಿಗಾಗಿ | ರೂ.25,000/- | 3.00 ಲಕ್ಷ | 1.00 ಲಕ್ಷ |
| 2 | ದೌರ್ಜನ್ಯ / ಅತ್ಯಾಚಾರ/ ಸಾಮೂಹಿಕ ಅತ್ಯಾಚಾರ. ಸುಟ್ಟಗಾಯಗಳು (498 (ಎ) ರಡಿ ದಾಖಲಾದ ಪ್ರಕರಣ) ಮತ್ತು ಇತರೆ ತೀವ್ರತರ ದೌರ್ಜನ್ಯಕ್ಕೊಳಪಟ್ಟ ಮಹಿಳೆಯರಿಗಾಗಿ | ರೂ.25,000/- | 2.00 ಲಕ್ಷ | 1.00 ಲಕ್ಷ |

ಅನುಬಂಧ-4

**ಕರ್ನಾಟಕ ಮಹಿಳೆಯರ ನಿಧಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಸಮಿತಿ ರಚನೆ**

| | | |
|---|---|---|
| 1 | ಜಿಲ್ಲೆಯ ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲೆಯ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ | ಉಪಾಧ್ಯಕ್ಷರು |
| 3 | ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು /.ಜಿಲ್ಲಾ ಸರ್ಜನ್ | ಸದಸ್ಯರು |
| 4 | ಜಿಲ್ಲೆಯ ಸ್ವಯಂಸ್ವೇವಾ ಸಂಸ್ಥೆಯ ಇಬ್ಬರು ಮಹಿಳಾ ಪ್ರತಿನಿಧಿಗಳು | ಸದಸ್ಯರು |
| 5 | ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ರತಿನಿಧಿ | ಸದಸ್ಯರು |
| 6 | ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

3/8/15
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ – 2.
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.